ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 26-01-1971.

*ಜವಾಬ್ದಾರಿ ತೆಗೆದುಕೊಳ್ಳುವುದರಿಂದ ಲಾಭಗಳು* (ज़िम्मेवारी उठाने से फायदे)

ನೀವು ವಿಶ್ವದ ಪರಿವರ್ತನೆ ಮಾಡುವಂತಹ ವಿಶ್ವದ ಆಧಾರಮೂರ್ತಿ ಆಗಿದ್ದೀರಿ. ಉದ್ಧಾರ ಮಾಡುವವರೂ ಆಗಿದ್ದೀರಿ ಮತ್ತು ವಿಶ್ವದ ಮುಂದೆ ಉದಾಹರಣೆ ಆಗುವವರೂ ಆಗಿರುವಿರಿ. ಆಧಾರಮೂರ್ತಿಗಳ ಮೇಲೆಯೇ ಎಲ್ಲಾ ಜವಾಬ್ದಾರಿಯಿರುತ್ತದೆ. ಈಗ ತಮ್ಮ ಒಂದೊಂದು ಹೆಜ್ಜೆಯ ಹಿಂದೆ ಅನೇಕರ ಹೆಜ್ಜೆಯಿಡಿಸುವ ಜವಾಬ್ದಾರಿಯಿದೆ. ಮೊದಲು ಸಾಕಾರ ತಂದೆಯನ್ನು ಅನುಸರಿಸಲು ಸಮ್ಮುಖದಲ್ಲಿದ್ದರು. ಈಗ ತಾವು ನಿಮಿತ್ತ ಮೂರ್ತಿಗಳಾಗಿದ್ದೀರಿ. ಹೇಗೆ, ಯಾವ ರೂಪದಲ್ಲಿ, ಎಲ್ಲಿ ನಾವು ಹೆಜ್ಜೆ ಇಡುವೆವೋ ಅದೇ ರೀತಿ ಸರ್ವಾತ್ಮರು ನಮ್ಮನ್ನು ಅನುಸರಿಸುವರು ಎಂಬ ಜವಾಬ್ದಾರಿಯಿದೆ. **ಸರ್ವರ ಉದ್ಧಾರ ಮೂರ್ತಿ ಆಗುವುದರಿಂದ ಸರ್ವಾತ್ಮರಿಂದ ಆಶೀರ್ವಾದಗಳು ಲಭಿಸುತ್ತವೆ. ಅವುಗಳಿಂದ ನಿಮಗೆ ಹಗುರತೆ ಬರುತ್ತದೆ. ಅಷ್ಟೇ ಅಲ್ಲ ಸಹಾಯ ಕೂಡ ಲಭಿಸುತ್ತದೆ. ಆದ್ದರಿಂದ ಆ ಜವಾಬ್ದಾರಿ ಹಗುರವಾಗಿ ಅನುಭವವಾಗುತ್ತದೆ.** ಕಾರ್ಯ ದೊಡ್ಡದಾದಾಗಲೂ ಯಾರೋ ನಮ್ಮಿಂದ ಮಾಡಿಸುತ್ತಿದ್ದಾರೆ ಎಂಬ ಅನುಭವವಾಗುತ್ತದೆ. ಈ ಜವಾಬ್ದಾರಿ ನಿಮ್ಮ ದಣಿವನ್ನು ಕೂಡ ಇಲ್ಲದಂತೆ ಮಾಡುತ್ತದೆ. ಆರಾಮಾಗಿ ಇರಲು ಮನಸ್ಸಿಗೆ ಇಷ್ಟವಾಗುವುದಿಲ್ಲ. ಜವಾಬ್ದಾರಿ ಎಂಬುವುದು ಸ್ಥಿತಿಯನ್ನು ತಯಾರು ಮಾಡುವುದರಲ್ಲಿ ಬಹಳ ಸಹಾಯ ಮಾಡುತ್ತದೆ. ಬಾಪ್ ದಾದಾ ಮಹಾರಥಿಯರನ್ನು ನೋಡಿದಾಗ ಎಲ್ಲರ ವರ್ತಮಾನ ಸ್ವರೂಪ, ಈ ಜನ್ಮದ ಅಂತಿಮ ಸ್ವರೂಪ ಮತ್ತು ಮುಂದಿನ ಜನ್ಮದ ಭವಿಷ್ಯ ಸ್ವರೂಪ ಮೂರೂ ಎದುರಿಗೆ ಬರುತ್ತವೆ. ಹೀಗೆ ನಾವು ಆಗುವವರಿದ್ದೇವೆ, ನಾವು ಕಿರೀಟ ಮತ್ತು ಸಿಂಹಾಸನಧಾರಿಗಳು ಆಗುವೆವು ಎಂಬ ಅನುಭವ ತಮಗೆ ಸ್ಪಷ್ಟವಾಗಿ ಆಗುತ್ತದೆಯೇ? ಮುಂದೆ ಈ ರೀತಿ ಅನುಭವ ಮಾಡುವಿರಿ, ಹೇಗೆ ಸಾಕಾರ ರೂಪದಲ್ಲಿ ಪ್ರತ್ಯಕ್ಷ ಅನುಭವ ಮಾಡಿದರಲ್ಲವೇ? ಕರ್ಮಾತೀತ ಸ್ಥಿತಿಯೂ ಸ್ಪಷ್ಟವಾಗಿತ್ತು ಮತ್ತು ಭವಿಷ್ಯ ಸ್ವರೂಪದ ಸ್ಮೃತಿಯೂ ಸ್ಪಷ್ಟವಾಗಿತ್ತು. ಭವಿಷ್ಯ ಸಂಸ್ಕಾರ ಈ ಸ್ವರೂಪದಲ್ಲಿ ಪ್ರತ್ಯಕ್ಷ ಕಂಡುಬರುತ್ತಿದ್ದವು. ತಾವೆಲ್ಲಾ ಈ ಶರೀರವನ್ನು ಬಿಡುವುದು ಮತ್ತು ಹೊಸ ಶರೀರವನ್ನು ಧರಿಸುವ ಅನುಭವ ಮಾಡುವಿರಿ. ಬುದ್ಧಿಬಲದಿಂದ ಇಷ್ಟು ಅನುಭವವಾಗುವುದು. ದಿನದಿಂದದಿನಕ್ಕೆ ಇನ್ನೂ ತಮ್ಮ ಸೇವೆಯಿಂದ, ಸಹಯೋಗದಿಂದ ಮತ್ತು ತಮ್ಮ ಸಂಸ್ಕಾರಗಳನ್ನು ಅಳಿಸುವ ಶಕ್ತಿಯಿಂದ ತಮ್ಮ ಅಂತಿಮ ಸ್ವರೂಪ ಮತ್ತು ಭವಿಷ್ಯ, ನಿಮ್ಮ ಸಮೀಪವಿರುವವರು ಮತ್ತು ದೂರವಿರುವವರು ಸ್ಪಷ್ಟವಾಗಿ ಕಂಡುಬರುವರು. ಎಂದು ಆದಿಯಲ್ಲಿ ಹೇಳುತ್ತಿದ್ದಿರಿ ಆದರೆ ಈಗ ಆ ಸಮಯ ನಡೆಯುತ್ತಿದೆ. ದೈವಿ ಪರಿವಾರದ ಆತ್ಮರು, ಸಮೀಪ ರತ್ನಗಳು ಯಾರು ಎಂದು ತಿಳಿದುಕೊಳ್ಳುವರು. ಯಾರಿಗೆ ಎಷ್ಟು ಸಮೀಪ ಬರುವುದಿದೆಯೋ ಅಷ್ಟು ಪರಿಸ್ಥಿತಿಗನುಸಾರ ಅಷ್ಟು ಸಮೀಪ ಬರುವರು. ಯಾರಿಗೆ ದೂರ ಹೋಗುವುದಿದೆಯೋ ಅವರಿಗೆ ಪರಿಸ್ಥಿತಿಗಳು ನಿಮಿತ್ತವಾಗಿ ಬರಲು ಇಚ್ಛಿಸುತ್ತಿದ್ದರೂ ಬರಲಾಗುವುದಿಲ್ಲ. ಇವೆಲ್ಲವೂ ಭವಿಷ್ಯದ ಸಾಕ್ಷಾತ್ಕಾರ. ಈಗ ಪ್ರ್ಯಾಕ್ಟಿಕಲ್ ಸೇವೆ ನಡೆದಿದೆ. ತಮ್ಮ ಭವಿಷ್ಯವನ್ನು ತಿಳಿಯುವುದು ಈಗ ಕಷ್ಟವೇನಲ್ಲ.

ಪ್ರತಿಯೊಬ್ಬರಿಗೂ ವ್ಯಕ್ತಿಗತವಾಗಿ, ತಮಗಾಗಿ ವಿಶೇಷ ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕು. ಸೇವೆಯ ಕಾರ್ಯಕ್ರಮಗಳನ್ನು ಹೇಗೆ ಮಾಡುತ್ತೀರೋ, ಹಾಗೆ ಬೆಳಿಗ್ಗೆಯಿಂದ ರಾತ್ರಿಯವರೆಗೆ ಮಧ್ಯ-ಮಧ್ಯದಲ್ಲಿ ಎಷ್ಟು ಮತ್ತು ಹೇಗೆ ತಮ್ಮ ನೆನಪಿನ ಯಾತ್ರೆಗೆ ಗಮನವಿಡಲು ಕಾರ್ಯಕ್ರಮ ಇಡುವುದಕ್ಕೆ ಡೈರಿ ಮಾಡಬೇಕು. ಅಮೃತವೇಳೆಯಲ್ಲಿಯೇ ನೆನಪಿನ ಯೋಜನೆ ಮಾಡಬೇಕು. ತಾವು ಸ್ಥೂಲ ಕಾರ್ಯದಲ್ಲಿ ವ್ಯಸ್ತರಾಗಿರುತ್ತೀರಿ ಆದರೆ ಅದರಲ್ಲಿಯೂ ಸ್ವಲ್ಪ ಸಮಯಕ್ಕಾಗಿ ನೆನಪು ಮಾಡಲು ನಿಯಮ ಮಾಡಲ್ಪಟ್ಟಂತೆ ಬೇರೆಯವರಿಗೂ 2-3 ನಿಮಿಷ ಈಗ ನಮ್ಮ ಕೆಲಸ ತಂದೆಯನ್ನು ನೆನಪು ಮಾಡುವುದು. ತಾವೂ ಸಹ ಮಾಡಿ ಎಂದು ಸ್ಮೃತಿಯಲ್ಲಿ ತನ್ನಿ. ನಿಗದಿ ಪಡಿಸಿದ ಸಮಯಕ್ಕೆ ಟ್ರಾಫಿಕ್ ತಡೆಯುವಂತೆ ಎಷ್ಟೇ ಅವಶ್ಯಕ ಕೆಲಸವಿರಲಿ. ಯಾವುದೇ ರೋಗಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವುದಿರಬಹುದು ಆದರೂ ತಡೆಯುವರು. ಈ ರೀತಿ ಎಷ್ಟು ಸಾಧ್ಯವೋ ಅಷ್ಟು ವೇಳಾಪಟ್ಟಿಯನ್ನು ಮಾಡಿ ಆಗ

ಇವರ ಈ ಸಮಯ ಪರಮಾತ್ಮನ ನೆನಪಿಗಾಗಿ ನಿಗದಿಯಾಗಿದೆ ಎಂದು ಅವರೂ ತಮ್ಮನ್ನು ಅನುಸರಿಸುವರು. ಯಾವುದೇ ಕಾರ್ಯವಿರಲಿ ಅದನ್ನು ಸ್ವಲ್ಪ ಹಿಂದೆ-ಮುಂದೆ ಮಾಡಿ 3-4 ನಿಮಿಷ ನೆನಪಿನಲ್ಲಿರಿ ಅದರಿಂದ ವಾಯುಮಂಡಲದ ಮೇಲೆಯೂ ಪ್ರಭಾವ ಬೀಳುವುದು. ಎಲ್ಲರೂ ಒಬ್ಬೊಬ್ಬರನ್ನು ಅನುಸರಿಸುವರು. ಬುದ್ಧಿಗೆ ವಿಶ್ರಾಂತಿಯೂ ಸಿಗುವುದು ಮತ್ತು ಶಕ್ತಿಯೂ ತುಂಬುವುದು ಮತ್ತು ವಾಯುಮಂಡಲಕ್ಕೆ ಸಹಯೋಗ ಸಿಗುವುದು. ಆಮೇಲೆ ಅಮೋಘವಾಗಿರುವಂತಹ ಸ್ಥಿತಿ (ಅನನ್ಯತೆ) ಕಂಡು ಬರುವುದು. ಕೆಲವು ಸಮಯದ ಹಿಂದೆ ತಾವು ಒಬ್ಬರು ಇನ್ನೊಬ್ಬರಿಗೆ "ಶಿವ ತಂದೆಯ ನೆನಪಿದೆಯಾ" ಎಂದು ನೆನಪು ಮಾಡಿಸುತ್ತಿದ್ದಿರಿ ಹಾಗೆಯೇ, ಯಾರಾದರೂ ವ್ಯಕ್ತಭಾವದಲ್ಲಿ ಹೆಚ್ಚು ಇದ್ದುದನ್ನು ನೋಡುವಾಗ ಹೇಳದೆಯೇ ಸನ್ನೆಯಿಂದಲೇ ತಿಳಿದುಕೊಳ್ಳುತ್ತಾರೆ. ತಮ್ಮ ಅವ್ಯಕ್ತ ಶಾಂತರೂಪವನ್ನು ಧಾರಣೆ ಮಾಡಿ. ಆಗ ವಾತಾವರಣ ಸ್ವಲ್ಪ ಅವ್ಯಕ್ತವಾಗಿರುವುದು. ನಿಮ್ಮ ಅಂತಿಮ ಸ್ಥಿತಿ - ಸಾಕ್ಷಾತ್ಕಾರ ಮೂರ್ತಿಯಾಗುವುದು. ಹೇಗೆ ಸಾಕ್ಷಾತ್ ಮೂರ್ತಿಯಾಗುವಿರೋ ಹಾಗೆಯೇ ಸಾಕ್ಷಾತ್ಕಾರ ಮೂರ್ತಿಯಾಗುವಿರಿ. ಯಾವಾಗ ಮೂರ್ತಿಯಾಗುವಿರೋ, ಆಗ ಎಲ್ಲರ ಸಂಸ್ಕಾರವೂ ಸಾಕ್ಷಾತ್ ಮೂರ್ತಿಯ ಸಮಾನ ಆಗುವವು. ಎಷ್ಟು ನಿಮ್ಮನ್ನು ನೀವು ಚಾರ್ಜ್ ಮಾಡಿಕೊಳ್ಳುತ್ತಿರೋ ಅಷ್ಟು ಇಂಚಾರ್ಜ್ ಕರ್ತವ್ಯಗಳನ್ನು ಸಫಲತಾಪೂರ್ವಕವಾಗಿ ಮಾಡಬಲ್ಲಿರಿ. ತಮ್ಮನ್ನು ನಿಮಿತ್ತ ಎಂದು ತಿಳಿದು ಹೆಜ್ಜೆಯಿಡಬೇಕು. ಹೇಗೆ ತಮ್ಮಿಂದ ಜನರಿಗೆ ಈಶ್ವರೀಯ ಸ್ನೇಹ, ಶ್ರೇಷ್ಠ ಜ್ಞಾನ ಮತ್ತು ಶ್ರೇಷ್ಠ ಚರಿತ್ರೆಗಳ ಸಾಕ್ಷಾತ್ಕಾರವಾಗುತ್ತದೆಯೋ, ಹಾಗೆಯೇ ಅಷ್ಟೇ ಸ್ಪಷ್ಟವಾಗಿ ಅವ್ಯಕ್ತ ಸ್ಥಿತಿಯ ಸಾಕ್ಷಾತ್ಕಾರವಾಗುವುದು. ಇವರು ನಡೆದಾಡುವ ಫರಿಶ್ತೆಯಾಗಿದ್ದಾರೆ ಎಂದು ಯಾರಿಗೇ ಆಗಲಿ ಅನುಭವವಾಗುವಂತೆ ಯೋಜನೆಯನ್ನು ಮಾಡಿ. ಸಾಕಾರ ರೂಪದಲ್ಲಿ ಫರಿಶ್ತಾ ಸ್ಥಿತಿಯ ಅನುಭವ ಮಾಡಿದಿರಲ್ಲವೇ? ಇಷ್ಟು ದೊಡ್ಡ ಜವಾಬ್ದಾರಿಯಿದ್ದಾಗಲೂ ಆಕಾರಿ ಮತ್ತು ನಿರಾಕಾರಿ ಸ್ಥಿತಿಯ ಅನುಭವ ಮಾಡಿಸುತ್ತಿದ್ದರು. ತಮ್ಮ ಅಂತಿಮ ಸ್ಥಿತಿಯ ಸ್ವರೂಪ ಸ್ಪಷ್ಟವಾಗಿ ಕಂಡುಬರಬೇಕು. ಯಾರು ಎಷ್ಟೇ ಅಶಾಂತ ಅಥವಾ ಅಸಮಾಧಾನ, ಹೆದರಿದವರು ಬಂದರೂ ತಮ್ಮ ಒಂದು ದೃಷ್ಟಿ, ಸ್ಮೃತಿ ಮತ್ತು ವೃತ್ತಿಯ ಶಕ್ತಿ ಅವರನ್ನು ಪೂರ್ಣ ಶಾಂತ ಮಾಡಬೇಕು. ಯಾರು ಎಷ್ಟೇ ವ್ಯಕ್ತ ಭಾವದಲ್ಲಿದ್ದರೂ ತಮ್ಮೆದುರಿಗೆ ಬಂದಾಗ ಅವ್ಯಕ್ತ ಸ್ಥಿತಿಯ ಅನುಭವ ಮಾಡಬೇಕು. ತಮ್ಮ ದೃಷ್ಟಿ ಕಿರಣಗಳ ಕೆಲಸ ಮಾಡಬೇಕು. ಇಲ್ಲಿಯವರೆಗಿನ ಫಲಿತಾಂಶದಲ್ಲಿ ಮಾಸ್ಟರ್ ಸೂರ್ಯನ ಸಮಾನ ಜ್ಞಾನದ ಪ್ರಕಾಶವನ್ನು ಕೊಡುವ ಕರ್ತವ್ಯದಲ್ಲಿ ಸಫಲರಾಗಿರುವಿರಿ. **ಆದರೆ ಕಿರಣಗಳ ಶಕ್ತಿಯಿಂದ ಪ್ರತಿಯೊಂದು ಆತ್ಮನ ಸಂಸ್ಕಾರ ರೂಪದ ಕೀಟಾಣುವನ್ನು ನಾಶ ಮಾಡುವ ಕರ್ತವ್ಯವನ್ನು ಮಾಡಬೇಕು. ಪ್ರಕಾಶವನ್ನು ಕೊಡುವಲ್ಲಿ ಪಾಸಾಗಿದ್ದೀರಿ, ಶಕ್ತಿಯನ್ನು ಕೊಡುವ ಕರ್ತವ್ಯ ಈಗ ಉಳಿದಿದೆ.**

ಬಾಪ್ ದಾದಾರ ಬಳಿ ನಾಲ್ಕು ಲಿಸ್ಟ್ ಇವೆ 1) ಸರ್ವಿಸಬಲ್ (ಸೇವಾಧಾರಿಗಳು). 2) ಸೆನ್ಸೇಬಲ್ (ಬುದ್ಧಿವಂತರು) 3) ಸಕ್ಸೆಸ್ ಫುಲ್ (ಸಫಲತಾ ಮೂರ್ತಿ) 4) ವ್ಯಾಲ್ಯೂವೆಬಲ್ (ಅಮೂಲ್ಯವಾದವರು) ಎಲ್ಲರೂ ಸಫಲರಾಗುವುದಿಲ್ಲ, ಎಲ್ಲರೂ ಅಮೂಲ್ಯರಾಗುವುದಿಲ್ಲ. ಕೆಲವರು ತಮ್ಮ ಗುಣಗಳಿಂದ, ಚರಿತ್ರೆಯಿಂದ ಅಮೂಲ್ಯರಾಗುತ್ತಾರೆ ಆದರೆ ಸೇವೆಯ ಯೋಜನೆಗಳಲ್ಲಿ ಸಫಲರಾಗುವುದಿಲ್ಲ. ಪ್ರತಿಯೊಬ್ಬರೂ ತಮ್ಮ ಚಾರ್ಟ್ ತಿಳಿದಿದ್ದೀರಿ. ನಮ್ಮ ಹೆಸರು ಯಾವ ಲಿಸ್ಟಿನಲ್ಲಿದೆ ಎಂದು ನೋಡಿಕೊಳ್ಳಿ. ಕೆಲವರದು ನಾಲ್ಕರಲ್ಲೂ ಹೆಸರಿದೆ, ಕೆಲವರದು ಎರಡರಲ್ಲಿ, ಕೆಲವರದು ಮೂರರಲ್ಲಿ ಇನ್ನು ಕೆಲವರದು ಒಂದರಲ್ಲಿದೆ. ಅಮೂಲ್ಯವಾಗಿರುವವರು ತಮ್ಮ ಸಮಯ, ಸಂಕಲ್ಪ ಮತ್ತು ಸೇವೆಯ ಬೆಲೆಯಿಡುತ್ತಾರೆ. ಆದ್ದರಿಂದ ಅವರ ಸಂಕಲ್ಪ, ಶಬ್ದ ಅಥವಾ ಅವರಿಂದ ಯಾವ ಸೇವೆಯಾಗುತ್ತದೆಯೋ ಅದಕ್ಕೆ ಎಲ್ಲರೂ ಇನ್ನೂ ಹೆಚ್ಚು ಬೆಲೆ ಕೊಡುತ್ತಾರೆ. ಅಥವಾ ಡ್ರಾಮಾನುಸಾರ ಅವರ ಬೆಲೆ ಹೆಚ್ಚಾಗುತ್ತದೆ. ಎಲ್ಲರೂ ಅವರನ್ನು ಅಮೂಲ್ಯವಾದವರು ಎಂಬ ದೃಷ್ಟಿಯಿಂದ ನೋಡುತ್ತಾರೆ. ಸೇವಾಧಾರಿ ಮೊದಲೋ ಅಥವಾ ವಿಚಾರವಂತರು ಮೊದಲೋ? ಇಬ್ಬರಿಗೂ ತಮ್ಮ-ತಮ್ಮ ವಿಶೇಷತೆಯಿದೆ. ವಿಚಾರವಂತರಲ್ಲಿ ಯೋಜನೆಗಳನ್ನು (ಈ) ಮಾಡುವ ಬುದ್ಧಿ ಜಾಸ್ತಿಯಿರುತ್ತದೆ ಆದರೆ ಪ್ರಾಕ್ಟಿಕಲ್‌ನಲ್ಲಿ ತರುವ ವಿಶೇಷತೆ ಕಡಿಮೆಯಿರುತ್ತದೆ. ಸೇವಾಧಾರಿಯಾಗಿರುವವನು ಯೋಜನೆಗಳನ್ನು ಕಡಿಮೆ ಮಾಡುತ್ತಾನೆ. ಆದರೆ ಪ್ರ್ಯಾಕ್ಟಿಕಲ್ ನಲ್ಲಿ ಬರುವ ವಿಶೇಷ ಗುಣ ಅವರಲ್ಲಿರುತ್ತದೆ. ಕೆಲವರಲ್ಲಿ ತಿಳುವಳಿಕೆ ಗುಣ ಮತ್ತು ಸೇವೆಯ ಗುಣ ಎರಡೂ ಇರುತ್ತವೆ. ಈ ಸ್ಥಾಪನೆಯ ಕರ್ತವ್ಯದಲ್ಲಿ ಎರಡೂ ಅವಶ್ಯಕವಾಗಿವೆ. ಅವರ ಸಂಕಲ್ಪ, ಪ್ಲಾನ್ ಗಳಿಂದ ಭವಿಷ್ಯವಾಗುತ್ತದೆ.

ಅವರ ಕರ್ಮಗಳಿಂದ ಅಧಿಕ ಪ್ರಭಾವವಾಗುತ್ತದೆ. ಅವರ ಕರ್ಮದ ಪ್ರಭಾವವೂ ಕೂಡ ಹೆಚ್ಚಿರುತ್ತದೆ. ಸಫಲತಾ ಮೂರ್ತಿಗಳಿಗೆ ಅವ್ಯಕ್ತ ಸ್ಥಿತಿಯ ಆಧಾರದ ಮೇಲೆ ಪರಿಣಾಮ ಬರುತ್ತದೆ. ಕೆಲವರ ಪ್ಲಾನ್ ನಡೆಯುತ್ತದೆ. ಪ್ರಾಕ್ಟಿಕಲ್ ನಲ್ಲಿಯೂ ಮಾಡುತ್ತಾರೆ. ಆದರೆ ಸಫಲತೆ ಕಡಿಮೆ ಸಿಗುತ್ತದೆ. ಸೇವಾಧಾರಿಗಳಾಗಬಹುದು ಆದರೆ ಸಫಲತಾಮೂರ್ತಿ ಎಲ್ಲರೂ ಆಗುವುದಿಲ್ಲ. ಕೆಲವರಿಗೆ ಡ್ರಾಮಾನುಸಾರ ಸಫಲತೆಯ ವರದಾನ ಸಿಕ್ಕಿರುತ್ತದೆ. ಅವರಿಗೆ ಕಡಿಮೆ ಪರಿಶ್ರಮ ಮಾಡಬೇಕಾಗುತ್ತದೆ. ಸಹಜವಾಗಿ ಸಫಲತೆ ಸಿಗುತ್ತದೆ. ನಾಟಕದಲ್ಲಿ ಪ್ರತಿಯೊಬ್ಬರಿಗೂ ತಮ್ಮದೇ ಆದಂತಹ ಪಾತ್ರ ಸಿಕ್ಕಿದೆ. ಒಳ್ಳೆಯದು.

ಶಿಕ್ಷಕಿಯರಿಗೆ ಸದಾ ಶಿಕ್ಷಕಿಯಾಗುವ ಮೊದಲು ನಾನು ವಿದ್ಯಾರ್ಥಿಯಾಗಿದ್ದೇನೆ ಎಂಬುದು ಸ್ಮೃತಿಯಲ್ಲಿರಬೇಕು. ವಿದ್ಯಾರ್ಥಿಯ ಸ್ಮೃತಿಯಿಂದ ವಿದ್ಯಾಧ್ಯಯನ ನೆನಪಿಗೆ ಬರುವುದು. ಸ್ವಯಂ ಅಧ್ಯಯನ ಮಾಡಿದಾಗ ಬೇರೆಯವರಿಗೆ ಮಾಡಿಸುವಿರಿ. ವಿದ್ಯಾರ್ಥಿ ಜೀವನ ಇಲ್ಲದಿರುವ ಕಾರಣ ಬೇರೆಯವರನ್ನು ವಿದ್ಯಾರ್ಥಿಗಳನ್ನಾಗಿ ಮಾಡಲಾರಿರಿ. ವಾತಾವರಣವನ್ನು ಬದಲಿಸಲು ತಮ್ಮನ್ನು ಸದಾ ಮಾಸ್ಟರ್ ಸೂರ್ಯ ಎಂದು ತಿಳಿದುಕೊಳ್ಳಬೇಕು. ಸೂರ್ಯನ ಕರ್ತವ್ಯವೇನು? ಬೆಳಕನ್ನು ಕೊಡುವುದು ಮತ್ತು ಕೊಳಚೆಯನ್ನು ನಾಶ ಮಾಡುವುದು. ಆದ್ದರಿಂದ ಸದಾ ನನ್ನ ನಡತೆ ಎಂಬ ಕಿರಣಗಳಿಂದ ಈ ಎರಡೂ ಕರ್ತವ್ಯಗಳು ಆಗುತ್ತಿವೆಯೇ ಎಂದು ತಿಳಿದುಕೊಳ್ಳಬೇಕು. ಎಲ್ಲಾ ಆತ್ಮರಿಗೆ ಬೆಳಕು ಸಿಗಬೇಕು. ಕೊಳಚೆಯೂ ನಾಶವಾಗಬೇಕು. ಬೆಳಕು ಬಂದರೂ ಕೊಳಚೆ ನಾಶವಾಗದಿದ್ದರೆ ನನ್ನ ಕಿರಣಗಳಲ್ಲಿ ಶಕ್ತಿಯಿಲ್ಲ ಎಂದು ತಿಳಿದುಕೊಳ್ಳಿ. ಬಿಸಿಲು ಪ್ರಖರವಾಗಿಲ್ಲದಿದ್ದರೆ ಕೀಟಾಣು ನಾಶವಾಗುವುದಿಲ್ಲ. ನನ್ನಲ್ಲಿ ಶಕ್ತಿ ಕಡಿಮೆಯಿದ್ದರೆ ಜ್ಞಾನ ಬೆಳಕನ್ನು ಕೊಡುವುದು. ಆದರೆ ಹಳೆಯ ಸಂಸ್ಕಾರ ರೂಪದ ಕೀಟಾಣು ನಾಶವಾಗುವುದಿಲ್ಲ. ಶಕ್ತಿಶಾಲಿಯಾಗಿದ್ದರೆ, ಸಮಯ ಕಡಿಮೆ ಬೇಕಾಗುವುದು. ಆದ್ದರಿಂದ ಶಕ್ತಿಶಾಲಿಯಾಗಬೇಕು. ಕಲಿತಿಲ್ಲವೆಂದು ತಿಳಿಯಬೇಡಿ. ಸೃಷ್ಟಿಯ ಜ್ಞಾನವನ್ನು ಓದಿದರೆ ಅದರಲ್ಲಿ ಎಲ್ಲವೂ ಬಂದಿತು. ಒಳ್ಳೆಯದು.

ಅವ್ಯಕ್ತ ಮುರಳಿ 26-01-1971.

***ಜವಾಬ್ದಾರಿ ತೆಗೆದುಕೊಳ್ಳುವುದರಿಂದ ಲಾಭ***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ವಿಶ್ವವನ್ನು ಪರಿವರ್ತಿಸುವ ಆಧಾರ ಮೂರ್ತಿ, ಉದ್ಧಾರ ಮೂರ್ತಿ, ಮತ್ತು ವಿಶ್ವದ ಮುಂದೆ ಉದಾಹರಣಾ ಮೂರ್ತಿ.

2. 'ನಾನು ಯಾವ ರೂಪದ ಹೆಜ್ಜೆ ಇಡುತ್ತೇನೆಯೋ ಹಾಗೆ ಸರ್ವಾತ್ಮರೂ ನನ್ನ ಹಿಂದೆ ಅನುಸರಿಸುತ್ತಾರೆ' ಎಂಬ ಗಮನದಿಂದ ಪ್ರತಿಯೊಂದು ಕರ್ಮವನ್ನು ಆಚರಿಸುತ್ತಿದ್ದೇನೆ.

3. ನಾನು ವರ್ತಮಾನ ಸ್ವರೂಪ, ಅಂತಿಮ ಸ್ವರೂಪ ಮತ್ತು ಭವಿಷ್ಯ ಸ್ವರೂಪ - ಈ ಮೂರನ್ನು ಎದುರುಗಡೆ ಇಟ್ಟುಕೊಂಡು ಪುರುಷಾರ್ಥವನ್ನು ಮಾಡುವ ಮಹಾರಥಿ.

4. ನಾನು ಎಲ್ಲರಿಗೂ ಸಾಕ್ಷಾತ್ಕಾರ ಮಾಡಿಸುವ ಸಾಕ್ಷಾತ್ಕಾರ ಮೂರ್ತಿ.

5. ನಾನು ಸಫಲತಾ ಪೂರ್ವಕವಾಗಿ ಕರ್ತವ್ಯವನ್ನು ನಿಭಾಯಿಸುವ ಶ್ರೇಷ್ಠ ಇಂಚಾರ್ಜ್ ಸ್ವರೂಪ.

6. ನಾನು ನಡೆಯುತ್ತಾ, ಓಡಾಡುತ್ತಾ ಫರಿಶ್ತಾ ಸ್ಥಿತಿಯ ಅನುಭವವನ್ನು ಮಾಡುತ್ತಿದ್ದೇನೆ.

7. ನನ್ನ ದೃಷ್ಟಿ, ಸ್ಮೃತಿ ಮತ್ತು ವೃತ್ತಿಯ ಶಕ್ತಿಯಿಂದ ಎಷ್ಟೇ ಅಶಾಂತಿಯಲ್ಲಿ ಮತ್ತು ಗಾಬರಿಯಲ್ಲಿ ಇರುವ ಆತ್ಮರಿಗೆ ಶಾಂತಿಯನ್ನು ಅನುಭವ ಮಾಡಿಸಿದ್ದೇನೆ.

8. ನಾನು ಪ್ರತಿಯೊಬ್ಬ ಆತ್ಮನ ಸಂಸ್ಕಾರ ರೂಪಿ ಕೀಟಾಣುಗಳನ್ನು ನಾಶ ಮಾಡುವ ಕರ್ತವ್ಯವನ್ನು ಪೂರ್ಣಗೊಳಿಸಿದ್ದೇನೆ.

9. ನಾನು ಅಮೂಲ್ಯ ರತ್ನ.

10. ನಾನು ಯೋಜನೆಯನ್ನು ಮಾಡಿ ಪ್ರಾಕ್ಟಿಕಲ್ ನಲ್ಲಿಯೂ ತರುವ ಸಫಲತಾ ಮೂರ್ತಿ.

11. ನಾನು ಜ್ಞಾನದ ಪ್ರಕಾಶದೊಂದಿಗೆ ಶಕ್ತಿಯನ್ನು ಕೊಡುವ ಕರ್ತವ್ಯವನ್ನು ನಿಭಾಯಿಸುತ್ತಿದ್ದೆನೆ.